## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:ತುಮಕೂರು ಶಾಖಾ ನಾಲೆಯ ಸರಪಳಿ:45.75 ಕಿಮೀ ನಿಂದ ನೀರೆತ್ತಿ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಬಿಳಿಗೆರೆ ಕೆರೆ ಹಾಗೂ ಕಿಬ್ಬನಹಳ್ಳಿ ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

++ ++ ++

**ಓದಲಾಗಿದೆ :-**

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಇವರ ಟಿಪ್ಪಣಿ ಸಂಖ್ಯೆ:160 ದಿನಾಂಕ:07-01-2021.

**ಪ್ರಸ್ತಾವನೆ :-**

ಮೇಲೆ ಓದಲಾದ ಟಿಪ್ಪಣಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಇವರು ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಬಿಳಿಗೆರೆ, ಕಿಬ್ಬನಹಳ್ಳಿ, ಪಂಕಜನಹಳ್ಳಿ, ಹಟ್ನ, ಬಿಳಿಗೆರೆಪಾಳ್ಯ ಮತ್ತು ಕಿಬ್ಬನಹಳ್ಳಿಪಾಳ್ಯ ಗ್ರಾಮಗಳು ಬರ ಪೀಡಿತ ಪ್ರದೇಶವಾಗಿದ್ದು, ಯಾವುದೇ ನೀರಾವರಿ ಸೌಲಭ್ಯವಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ; ಮುಂದುವರೆದು, ಈ ವ್ಯಾಪ್ತಿಯಲ್ಲಿನ ಜಾನುವಾರುಗಳು ಕುಡಿಯುವ ನೀರಿಗಾಗಿ ಮಳೆ ನೀರನ್ನು ಆಶ್ರಿತವಾಗಿರುತ್ತದೆ; ಅಲ್ಲದೆ ಸುತ್ತಮುತ್ತಲಿನ ಪ್ರದೇಶದಲ್ಲಿ ಸುಮಾರು 900 ರಿಂದ 1200 ಅಡಿ ಆಳದವರೆಗೆ ಕೊಳವೆಬಾವಿ ಕೊರೆದರೂ ಸಹ ಸಾಕಷ್ಟು ನೀರು ದೊರಕುತ್ತಿರಲಿಲ್ಲ; ಈ ಸಂಬಂಧ ಬಿಳಿಗೆರೆ ಗ್ರಾಮಸ್ಥರು ಸಹಕಾರ ಸಂಘದಿಂದ ಬಿಳಿಗೆರೆ ಗ್ರಾಮದ ಕೆಳಭಾಗದಲ್ಲಿ ಒಂದು ಸಣ್ಣ ಏತ ಯೋಜನೆಯನ್ನು ಸುಮಾರು 20 ವರ್ಷಗಳ ಹಿಂದೆ ನಿರ್ಮಿಸಿಕೊಂಡು ಬಿಳಿಗೆರೆ ಕೆರೆಯನ್ನು ನೀರಿನ ಲಭ್ಯತೆ ಹಾಗೂ ವಿದ್ಯುತ್ ಲಭ್ಯತೆಗೆ ಅನುಗುಣವಾಗಿ ಕೆರೆಯನ್ನು ತುಂಬಿಸಿಕೊಳ್ಳುತ್ತಿರುತ್ತಾರೆ; ಬೆಳೆಗೆರೆ ಹಾಗೂ ಕಿಬ್ಬನಹಳ್ಳಿ ಕೆರೆಗಳು ಜಿಲ್ಲಾ ಪಂಚಾಯತ್ ಇಲಾಖಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ; ಈ ಯೋಜನೆಯನ್ನು ಸತತವಾಗಿ ಉಪಯೋಗಿಸಿಕೊಳ್ಳುತ್ತಿರುವುದರಿಂದ ಯೋಜನೆಯ ಯಂತ್ರೋಪಕರಣಗಳು, ವಿದ್ಯುತ್ ಉಪಕರಣಗಳು ಹಾಳಾಗಿದ್ದು, ಪಂಪ್‌ಹೌಸ್ ನ ಎ.ಸಿ. ಶೀಟ್‌ಗಳ ಛಾವಣಿಯು ದುರಸ್ತಿಗೆ ಒಳಪಟ್ಟಿರುತ್ತದೆ; ಈ ಸಂಬಂಧ ಇಲ್ಲಿಯವರೆಗೂ ವಿದ್ಯುತ್ ಶುಲ್ಕ ಮತ್ತು ನಿರ್ವಹಣೆಯನ್ನು ಗ್ರಾಮದ ಸಹಕಾರ ಸಂಘದಿಂದ ನಿರ್ವಹಿಸುತ್ತಿರುತ್ತಾರೆ; ಈ ಹಿಂದೆ ಸಹಕಾರ ಸಂಘದವರು ನಿರ್ಮಿಸಿರುವ ಯೋಜನೆಯು ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.

2. ಪ್ರಸ್ತುತ ಈ ವ್ಯವಸ್ಥೆಯು ಬಹುತೇಕ ಹಾಳಾಗಿದ್ದು, ಅವಶ್ಯಕ ಪರಿಮಾಣದ ನೀರನ್ನು ಬಿಳಿಗೆರೆ ಮತ್ತು ಕಿಬ್ಬನಹಳ್ಳಿ ಕೆರೆಗಳಿಗೆ ನೀರು ತುಂಬಿಸಲು ಸಾಧ್ಯವಾಗುತ್ತಿಲ್ಲ; ಈ ಹಿಂದೆ ನಿರ್ಮಿಸಿದ್ದ ಏತ ಯೋಜನೆಯ ಭಾಗಗಳು ಹಾಗೂ ಎ. ಸಿ. ಶೀಟ್‌ನಿಂದ ನಿರ್ಮಿಸಿರುವ ಪಂಪ್‌ಹೌಸ್ ಹಾಳಾಗಿದ್ದು, ಇವುಗಳನ್ನು ದುರಸ್ತಿ ಮಾಡಲು ಸಾಧ್ಯವಿರುವುದಿಲ್ಲ; ಆದ್ದರಿಂದ ಈ ಏತ ಯೋಜನೆಯನ್ನು ಹೊಸದಾಗಿ ಪುನರ್ ನಿರ್ಮಿಸುವುದು ಅವಶ್ಯಕವಾಗಿರುತ್ತದೆ ಎಂದು ತಮ್ಮ ವರದಿಯಲ್ಲಿ ತಿಳಿಸುತ್ತಾ 2018-19ನೇ ಸಾಲಿನ ದರಪಟ್ಟಿ ಆಧಾರದ ಮೇಲೆ ರೂ.6.25 ಕೋಟಿಗಳ ಮೊತ್ತದ ತುಮಕೂರು ಶಾಖಾ ನಾಲೆಯ ಸರಪಳಿ:45.75 ಕಿಮೀ ನಿಂದ ನೀರೆತ್ತಿ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಬಿಳಿಗೆರೆ ಕೆರೆ ಹಾಗೂ ಕಿಬ್ಬನಹಳ್ಳಿ ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆಯ ಅಂದಾಜನ್ನು ತಯಾರಿಸಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ರವರು ವರದಿ ಮಾಡಿರುತ್ತಾರೆ.

ಪುಟ-2ಕ್ಕೆ

3. ದಿನಾಂಕ:10-07-2020ರಂದು ಜರುಗಿದ ಕಾವೇರಿ ನೀರಾವರಿ ನಿಗಮದ ಅಂದಾಜು ಪರಿಶೀಲನಾ ಸಮಿತಿಯ 8ನೇ ಸಭೆಯಲ್ಲಿ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿ, ಸಮಿತಿಯು ಅಭಿಪ್ರಾಯಿಸಿರುವ ಅಂಶಗಳಿಗೆ ಕ್ರಮವಹಿಸುವ ಷರತ್ತಿಗೊಳಪಟ್ಟು ತೀರುವಳಿ ನೀಡಿರುತ್ತದೆ.

4. ಈ ಕೆರೆಗಳಿಗೆ ಕುಡಿಯುವ ನೀರನ್ನು ತುಂಬಿಸಲು ಸರ್ಕಾರದ ಪತ್ರ ದಿನಾಂಕ:26-08-2000 ರಲ್ಲಿ 60 ಎಂ.ಸಿ.ಎಫ್.ಟಿ. ನೀರಿನ ಹಂಚಿಕೆಯ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿ, ಸದರಿ ಯೋಜನೆಗೆ ಕಾವೇರಿ ನೀರಾವರಿ ನಿಗಮದ ಮಂಡಳಿಯ ಘಟನೋತ್ತರ ಅನುಮೋದನೆ ನಿರೀಕ್ಷಿಸಿ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ರವರು ತಮ್ಮ ಟಿಪ್ಪಣಿಯಲ್ಲಿ ಕೋರಿರುತ್ತಾರೆ.

5. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 4 ಎನ್ ಹೆಚ್ ಪಿ 2021,**
**ಬೆಂಗಳೂರು, ದಿನಾಂಕ:26-02-2021**

ತುಮಕೂರು ಶಾಖಾ ನಾಲೆಯ ಸರಪಳಿ: 45.75 ಕಿಮೀ ನಿಂದ ನೀರೆತ್ತಿ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಬಿಳಿಗೆರೆ ಕೆರೆ ಹಾಗೂ ಕಿಬ್ಬನಹಳ್ಳಿ ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆಯ ರೂ.6.25 ಕೋಟಿ (ರೂಪಾಯಿ ಆರು ಕೋಟಿ ಇಪ್ಪತ್ತೈದು ಲಕ್ಷಗಳು ಮಾತ್ರ) ಗಳ ಅಂದಾಜಿಗೆ ಕಂಡಿಕೆ-3ರಂತೆ ಕ್ರಮವಹಿಸುವ ಹಾಗೂ ಕಾವೇರಿ ನೀರಾವರಿ ನಿಗಮದ ಮಂಡಳಿಯ ಘಟನೋತ್ತರ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2019, ದಿನಾಂಕ:04-08-2019, ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

26/02/2021

**(ಮನೋಹರ ವೈ. ರೊಟ್ಟೆ)**
**ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)**
**ಜಲ ಸಂಪನ್ಮೂಲ ಇಲಾಖೆ.**

**ಇವರಿಗೆ :-**

1. ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನಸೌಧ, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

+++++